quickmarketreports.com

Date :27-02-2016

# ಅರ್ಜಿ ಹಾಕಿದ 7 ವರ್ಷಗಳ ನಂತರ ಬಾಸ್ಮತಿ ಅಕ್ಕಿಗೆ ಭೌಗೋಳಿಕ ಗುರುತು

ಭೌಗೋಳಿಕ ಗುರುತು ನೀಡುವಂತೆ ಬಾಸ್ಮತಿ ಅಕ್ಕಿಗೆ ಅರ್ಜಿ ಹಾಕಿ 7 ವರ್ಷಗಳ ನಂತರ ಚೆನ್ನೈ ಮೂಲಕ ಭೌಗೋಳಿಕ ಗುರುತು (ಜಿ1) ದಾಖಲು ವಿಭಾಗದಿಂದ 23–2–2016ರಂದು ಭೌಗೋಳಿಕ ಗುರುತು ದಾಖಲೆ ಲಭ್ಯವಾಗಿದೆಯೆನ್ನಲಾಗಿದೆ. ಇಂಡೋ ಗಂಗಾ ಬಯಲಲ್ಲಿ ಬೆಳೆಯುವ ಬಾಸ್ಮಾತಿ ಅಕ್ಕಿಗೆ ವಾಣಿಜ್ಯ ಸಚಿವಾಲಯದ ವಿಭಾಗ ಕೃಷಿ ಮತ್ತು ಸಂಸ್ಕರಿತ ಆಹಾರ ರಫ್ತು ಮತ್ತು ಅಭಿವೃದ್ಧಿ ಅಥಾರಿಟಿಗೆ (APMC) ಭೌಗೋಳಿಕ ಗುರುತು ದಾಖಲೆ (ಜಿ1) ಲಭ್ಯವಾಗಿದ್ದು ಜಾಗತಿಕ ವ್ಯವಹಾರದ 85% ಬಾಸ್ಮತಿ ಅಕ್ಕಿ ಇಲ್ಲಿಂದ ಪೂರೈಕೆಯಾಗುತ್ತಿದೆಯೆನ್ನಲಾಗಿದೆ. ಗುರುತು ದಾಖಲೆಯಿಂದ ಪಂಜಾಬ್, ಹರ್ಯಾನಾ, ಪಶ್ಚಿಮ ಉತ್ತರಪ್ರದೇಶ, ಉತ್ತರಾಖಂಡ, ದೆಹಲಿ ಮತ್ತು ಜಮ್ಮು ಮತ್ತು ಕಾಶ್ಮೀರಗಳ 77 ಜಿಲ್ಲೆಗಳಿಗೆ ಇದರ ಉಪಯೋಗವಾಗಲಿದೆಯೆನ್ನಲಾಗಿದೆ.

ಭಾರತದಲ್ಲಿ ಭೌಗೋಳಿಕ ಗುರುತು ಭದ್ರತೆ ದೊರಕಿರುವುದು, ಯುರೋಪ್ ಮತ್ತು ಯು.ಎಸ್‌ಗಳಲ್ಲಿ ಈ ತೆರದ ಇತರ ಪ್ರಾದೇಶಿಕ ದಾಖಲೆಯ ಭದ್ರತೆ ಹೊಂದಲು ಪ್ರೇರಣೆಯಾಗಬಹುದು ಮತ್ತು ಬಾಸ್ಮತಿ ಹೆಸರಿನಲ್ಲಿ ಭಾರತದ ಪ್ರತಿಸ್ಪರ್ಧಿಗಳು ವ್ಯವಹರಿಸುವಂತಿಲ್ಲವೆನ್ನಲಾಗಿದೆ.